ಯಾವುದೇ ನಿರ್ಣಯ ಕೈಗೊಳ್ಳದೇ, ನಮಗೆ ಇನ್ನೂ ಸ್ವಲ್ಪ ಸಮಯಾವಕಾಶ ಕೊಡಿ ಎಂದು ಕೇಳಿದರೆ, ಇದರಲ್ಲಿ ಏನೂ ಅರ್ಥವಿಲ್ಲ? ಇದರಿಂದಾಗಿ ಈ ದಿಸೆಯಲ್ಲಿ ಸರ್ಕಾರದ ನಿಲುವು ಏನು ಎಂಬುದು ನಮಗೆ ಅರ್ಥವಾಗುತ್ತಿದೆ. ಇದನ್ನು ನಾವು ಪ್ರತಿಭಟಿಸುತ್ತಾ ನಮ್ಮ ಧರಣಿಯನ್ನು ಮುಂದುವರೆಸುತ್ತಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಮ್ಮೆ ಸದನದ ಬಾವಿಗೆ ಹಿಂತಿರುಗಿ ಧರಣಿ ನಿರತರಾದರು).

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಅಧ್ಯಕ್ಷರೇ, ಈ ತಿಂಗಳು 30 ದಿವಸದಿಂದಲೂ ಕೂಡ ಸಿ.ಇ.ಟಿ. ಬಗ್ಗೆ ತೀರ್ಮಾನ ಮಾಡುತ್ತೇವೆ, ರಾಜ್ಯದ ಸಾಮಾನ್ಯ ಮತ್ತು ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತೇವೆ ಎಂದು ಸರ್ಕಾರ ಹೇಳುತ್ತಲೇ ಬಂದಿದೆ. ಆದರಲ್ಲಿ ಸರ್ಕಾರ ವಿಫಲವಾಗಿದೆ, ಮಾನ್ಯ ಅಧ್ಯಕ್ಷರೂ ಕೂಡ ಮಾನ್ಯ ಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದರು.- ಆದರೆ ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕೊಟ್ಟಿಲ್ಲ. ಸರ್ಕಾರ ಸಿ.ಇ.ಟಿ. ಬಗ್ಗೆ ತನ್ನ ಸಮಂಜಸವಾದ ನಿಲುವನ್ನು ವ್ಯಕ್ತಪಡಿಸದೇ ಇರುವುದನ್ನು ಪ್ರತಿಭಟಿಸಿ ಇತರ ವಿರೋಧ ಪಕ್ಷಗಳ ಶಾಸಕರುಗಳೊಂದಿಗೆ ನಮ್ಮ ಪಕ್ಷದ ಶಾಸಕರೂ ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇವೆ.

(ಈ ಹಂತದಲ್ಲಿ ಜನತಾ ದಳ (ಎಸ್) ಪಕ್ಷದ ಶಾಸಕರೂ ಕೂಡ ಶ್ರೀ ಚನ್ನಿಗಪ್ಪನವರ ನೇತೃತ್ವದಲ್ಲಿ ಧರಣಿಯಲ್ಲಿ ಪಾಲ್ಗೊಳ್ಳಲು ಸದನದ ಬಾವಿಗೆ ಆಗಮಿಸಿದರು).

ಅಧ್ಯಕ್ಷರು:- ಮಾನ್ಯ ಸಂಪಂಗಿಯವರೇ, ತಾವು ಏನೋ ಒಂದು ವಿಷಯವನ್ನು ಪ್ರಸ್ತಾಪಿಸಬೇಕೆಂದಿದ್ದಿರಿ.

ವಿಷಯ:- (ಆ) ಬಾಗೇಪಲ್ಲಿ ವಿಧಾನ ಸಭೆ ಕ್ಷೇತ್ರದಲ್ಲಿನ ಆಸ್ಪತ್ರೆಗೆ ವಿದ್ಯುತ್ ಸಂಪರ್ಕ ನಿಲುಗಡೆ ಮಾಡಿರುವ ಬಗ್ಗೆ

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಪ್ರಸ್ತಾಪಿಸುತ್ತಿಲ್ಲ. ನಮ್ಮ ಕ್ಷೇತ್ರದ ಆಸ್ಪತ್ರೆಯೊಂದರಲ್ಲಿ ಏನಾಗಿದೆ ಎಂದರೆ, ಮೊನ್ನೆ ಬಿಲ್ ಕಟ್ಟಿಲ್ಲವೆಂದು ಸಂಪರ್ಕ ಕಡಿತಗೊಳಿಸಿದ್ದರಿಂದಾಗಿ ಅಲ್ಲಿ ತೀವ್ರ ತೊಂದರೆಯಾಗಿದೆ.

(ಗೊಂದಲ)

ಅಧ್ಯಕ್ಷರು:- ತಾವು ಯಾವ ರೀತಿಯಾಗಿ ಇವತ್ತು ಸಿ.ಇ.ಟಿ. ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಿರೋ, ಅದೇ ರೀತಿಯಲ್ಲಿ ಅವರ ಕ್ಷೇತ್ರದ ಸಮಸ್ಯೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವರಿಗೂ ಸಹ ಹಕ್ಕಿದೆ. This is zero hour. He has got the right. ದಯವಿಟ್ಟು ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು:- ನೀವು ಹೇಳಿದ್ದನ್ನು ಮಾತ್ರ ನಾವು ಕೇಳಬೇಕು. ಅವರು ಹೇಳಿದ್ದನ್ನು ಕೇಳಬಾರದೇ? ಅದಕ್ಕೆ ನಮಗೆ ಹಕ್ಕಿಲ್ಲವೇ? ಅವರು ಅವರ ಸೀಟ್‌ನಲ್ಲಿ ನಿಂತು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಹೌಸ್ ಆರ್ಡರ್ ನಲ್ಲಿದೆಯೇ?

ಅಧ್ಯಕ್ಷರು:- ಹೌಸ್ ಆರ್ಡರ್‌ನಲ್ಲಿದೆ, Shall I read the rules?

(ಗೊಂದಲ)

ಅಧ್ಯಕ್ಷರು:- ನೀವು ಮಾತ್ರ ನಿಮ್ಮ ಕ್ಷೇತ್ರದ್ದು ಹೇಳಬಹುದು, ಅವರು ಅವರ ಕ್ಷೇತ್ರದ್ದು ಹೇಳಬಾರದೇ? ಹೌಸ್ ಆರ್ಡರ್‌ನಲ್ಲಿ ಇದೆಯೋ ಇಲ್ಲವೋ ಎಂಬ ಬಗ್ಗೆ ಸಂಬಂಧಪಟ್ಟ ರೂಲ್ಸ್ ಅನ್ನು ನಾನಿಲ್ಲಿ ಓದಿ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ತಾವು ಅಲ್ಲಿಂದ ಮಾತನಾಡಬೇಡಿ. ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

(ಗೊಂದಲ)

Mr. Speaker:- No, you must not talk like that. ತಾವು ತಮ್ಮ ಸೀಟಿಗೆ ಹೋಗಿ ಮಾತನಾಡಿ ಇಲ್ಲವೇ ಸುಮ್ಮನಿರಿ. ದಯವಿಟ್ಟು ಹೀಗೆಲ್ಲಾ ಬಿಹೇವ್ ಮಾಡಬೇಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸುರೇಶ್‌ಕುಮಾರ್‌ರವರು ಹೌಸ್ ಆರ್ಡರ್‌ನಲ್ಲಿ ಇದೆಯೋ ಇಲ್ಲವೋ ಎಂದು ಕೇಳಿದ್ದಕ್ಕೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡುತ್ತಿದ್ದಾರೆ. ದಯವಿಟ್ಟು ಅದಕ್ಕಾದರೂ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸುರೇಶ್‌ಕುಮಾರ್‌ರವರ ಹೌಸ್ ಆರ್ಡರ್‌ನಲ್ಲಿ ಇದೆಯೋ ಇಲ್ಲವೋ ಎಂದು ಕೇಳಿದ್ದಕ್ಕೆ ನಾನು ಉತ್ತರಿಸುತ್ತಿದ್ದೇನೆ. Mr. Jnanendra, you please keep quiet. Please go to your seat and talk. Don't behave unruly. Reporters, don't take down. What is this? I cannot understand.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಂಪಂಗಿಯವರಿಗೆ ಅವರ ಕ್ಷೇತ್ರದ ಸಮಸ್ಯೆ ಬಗ್ಗೆ ಪ್ರಸ್ತಾಪಿಸಲು ಹಕ್ಕು ಇದೆ ಎಂದು ನಾನು ಹೇಳುತ್ತಿದ್ದೇನೆ. ಸಿ.ಇ.ಟಿ. ಬಗ್ಗೆ ನಾನು ಹೇಳುತ್ತಿಲ್ಲ. ತಾವು ದಯವಿಟ್ಟು ತಮ್ಮ ಸೀಟ್‌ಗೆ ಹೋಗುತ್ತೀರೋ ಅಥವಾ ಇಲ್ಲವೋ? Please go to your seat and talk.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ (ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿ):- ಕರ್ನಾಟಕ ರಾಜ್ಯ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ರಾಜ್ಯವನ್ನು ಒತ್ತೆ ಇಟ್ಟಿದೆ. ಇದೊಂದು ಭ್ರಷ್ಟ ಸರ್ಕಾರವಾಗಿದೆ. ಈ ಸರ್ಕಾರ ಬಡವರ, ದಲಿತರ ಮತ್ತು ಹಿಂದುಳಿದ ವರ್ಗದವರ ಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸುತ್ತಿದೆ. ಅವರ ಭವಿಷ್ಯವನ್ನು ಕಿತ್ತುಕೊಳ್ಳುತ್ತಿದೆ. ಕರ್ನಾಟಕ ರಾಜ್ಯದ ಸಾಮಾನ್ಯ ಜನರ...

(ಗೊಂದಲ)

ಅಧ್ಯಕ್ಷರು:- ಸ್ವಾಮಿ, ನಿಮ್ಮ ನಾಯಕರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳಿದ್ದನ್ನೇ ನೀವು ಮತ್ತೊಮ್ಮೆ ನೀವ್ಯಾಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ವಿಧಾನ ಸಭೆಯಲ್ಲಿ ಇವತ್ತು ಏನು ನಡೆಯುತ್ತಿದೆ, ಏನು ರೂಲಿಂಗ್ ಅನ್ನು ತಾವು ಕೊಡುತ್ತಿದ್ದೀರಿ, ಈ ಸರ್ಕಾರದ ನಡವಳಿಕೆ ಯಾವ ರೀತಿ ಇದೆ ಎಂಬುದರ ಬಗ್ಗೆ ಇಡೀ ಕರ್ನಾಟಕ ರಾಜ್ಯದ ಜನತೆ ಇವತ್ತು ವಿಧಾನಸಭೆಯನ್ನು ನೋಡುತ್ತಿದ್ದಾರೆ. ಪಿ.ಯು.ಸಿ. ಓದುತ್ತಿರುವಂತಹ ಮಕ್ಕಳ ಪೋಷಕರು ಮತ್ತು ಪಾಲಕರು...

Mr. Speaker:- I have allowed Mr. Sampangi to talk.

(ಗೊಂದಲ)

(ಬಿಜೆಪಿ ಹಾಗೂ ಇನ್ನಿತರ ಎಲ್ಲಾ ಪಕ್ಷಗಳ ವಿರೋಧ ಪಕ್ಷಗಳ ಸದಸ್ಯರು ಬಾವಿಯಲ್ಲಿ ನಿಂತು ಕೂಗಲು ಪ್ರಾರಂಭಿಸಿದರು)

(2) ಮಂತ್ರಿಗಳ ಹೇಳಿಕೆ

ವಿಷಯ:- ಬರಗಾಲದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು

+ ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬರಗಾಲದ ಬಗ್ಗೆ ಅವರು ಬಹಳಷ್ಟು ಚರ್ಚೆ ಮಾಡಿದರು. ಆಟ್‌ಲೀಸ್ಟ್ ಸ್ಟೇಟ್‌ಮೆಂಟ್ ಮಾಡುವುದಕ್ಕಾದರೂ ಅವಕಾಶ ಮಾಡಿ ಕೊಡಿ. ಹಣ ಬಿಡುಗಡೆ ಮಾಡುವುದು, ಕುಡಿಯುವ ನೀರಿಗೆ ದುಡ್ಡು ಕೊಡುವುದು, ಜಾನುವಾರುಗಳಿಗೆ ಮೇವು ಕೊಡುವುದು ಇದಕ್ಕಾದರೂ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು:- ಮಲ್ಲಿಕಾರ್ಜುನ ನೀವು ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:- ಸಿಇಟಿ ಬಗ್ಗೆ ಸ್ಟೇಟ್‌ಮೆಂಟ್ ಕೊಡಲಿ. ಬರಗಾಲದ ಬಗ್ಗೆ ಕೇಳಿದ್ದಾರೆ ಅವರು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಗೌರ್ವನರ್ಸ್ ಅಡ್ರೆಸ್‌ನಲ್ಲಿ ಉತ್ತರ ಕೊಟ್ಟಿದ್ದೇವೆಂದು ಹೇಳುತ್ತಾರೆ, ಇಲ್ಲಿ ಬರಗಾಲದ ಬಗ್ಗೆ ಹೇಳುತ್ತಿದ್ದಾರೆ. ಮೊದಲು ಸಿಇಟಿ ಬಗ್ಗೆ ನಿಮ್ಮ ಸ್ಟ್ಯಾಂಡ್ ಏನೆಂಬುದನ್ನು ಹೇಳಿ.

ಅಧ್ಯಕ್ಷರು:- ಬರಗಾಲದ ಬಗ್ಗೆ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ಬಹಳ ಕಾತುರದಿಂದ ಇದ್ದಾರೆ. ಮಲ್ಲಿಕಾರ್ಜುನ್ ತಾವು ಸ್ಟೇಟ್‌ಮೆಂಟ್ ಓದಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಸುಮಾರು 11 ಜನ ಶಾಸಕರು ಈ ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ತಾವು ನನಗೆ ಉತ್ತರ ಕೊಡುವುದಕ್ಕೆ ಅಪ್ಪಣೆ ಕೊಟ್ಟಿದ್ದೀರಿ, ನಾನು ಉತ್ತರ ಕೊಡುತ್ತಿದ್ದೇನೆ. ಸುಮಾರು 159 ತಾಲ್ಲೂಕುಗಳು ಇವತ್ತು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆಯಾದ ಮೇಲೆ ಸರ್ಕಾರ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ, ಸುಮಾರು 1550 ಕೋಟಿ ರೂಪಾಯಿಗಳ ಹಣ, 11 ಲಕ್ಷ ಟನ್ ಅಕ್ಕಿಯನ್ನು ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಆ ಪ್ರಕಾರ ಕೇಂದ್ರ ಸರ್ಕಾರದವರು ಇಲ್ಲಿಯವರೆಗೆ ಸುಮಾರು 3.65 ಲಕ್ಷ ಟನ್ ಅಕ್ಕಿ ಕೊಟ್ಟಿದ್ದಾರೆ. ಸುಮಾರು 189 ಕೋಟಿ ರೂಪಾಯಿ ಹಣ ಕೊಟ್ಟಿದ್ದಾರೆ. ಇದಲ್ಲದೆ ಮೊನ್ನೆ ಕೂಡ 1.65 ಲಕ್ಷ ಟನ್ ಅಕ್ಕಿ ಕೊಟ್ಟಿದ್ದಾರೆ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ 3.44 ಲಕ್ಷ ಟನ್ ಅಕ್ಕಿ ಖರ್ಚಾಗಿರುವುದು ಕಳುಹಿಸಿ ಕೊಟ್ಟಿದ್ದೇವೆ. ಇದಲ್ಲದೆ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಸುಮಾರು 350 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ. 250 ಕೋಟಿ ರೂಪಾಯಿ